# ಗೋ ವಿಶ್ವ

Cow Universe

गौ विश्व

ಸರ್ವಧಾರಿ ಸಂವತ್ಸರ | ಫಾಲ್ಗುಣ | ಫೆಬ್ರುವರಿ ೨೦೦೯ | ಸಂಪುಟ-೩ | ಸಂಚಿಕೆ-೨


ಗುರುವಾಣಿ

## ಗೋವನ್ನೂ ಒಳಗೊಂಡಂತೆ ಸಕಲ ಜೀವಿಗಳ ಉಳಿವಿಗೆ ಧರ್ಮದ ಸರ್ವವ್ಯಾಪಕತೆಯನ್ನು ಅರಿಯುವುದು ಅನಿವಾರ್ಯ



ಗೋ ಸಂರಕ್ಷಣೆ ಎಂದರೆ ಕೇವಲ ಆ ಒಂದು ಪ್ರಭೇದದ ಸಂರಕ್ಷಣೆ ಎಂದು ಭಾವಿಸುವುದು ಬೇಡ. ಆ ಭಾವವನ್ನು ಹೊಂದಲು ಅದೊಂದು ಮಾಧ್ಯಮ ಅಷ್ಟೆ. ಗೋವು, ಗೋವಿನಿಂದ ಪಶುಪಕ್ಷಿಗಳ ಬಗೆಗೂ ಅದೇ ಭಾವನೆಯನ್ನು ತಳೆಯಬೇಕು. ಏಕೆಂದರೆ ಅದು ಈ ಸೃಷ್ಟಿಯ ಸಹಜತೆ. ಆದ್ದರಿಂದ ಅದು ಅನಿವಾರ್ಯ ಕೂಡ. ಹಾಗಾಗಿ ಅದಕ್ಕೆ ಧರ್ಮದ ಚೌಕಟ್ಟೂ ಇದೆ. ಆ ಚೌಕಟ್ಟನ್ನು ತಿಳಿದರೆ ಮುಂದಿನದು ತನ್ನಿಂದ ತಾನೇ ಬಿಡಿಸಿಕೊಂಡೀತು.

ಆ ನಿಟ್ಟಿನಲ್ಲಿ ನೋಡುತ್ತ ಸಾಗಿದಾಗ...

ಸ್ಥಿತಿ ವಿಶೇಷವೇ ಧರ್ಮ. ಅಂದರೆ ಕಣ್ಣಿಗೆ ನೋಡುವುದು, ಕಿವಿಗೆ ಕೇಳುವುದು, ಮೂಗಿಗೆ ಮೂಸುವುದು, ಸೂರ್ಯ-ಚಂದ್ರರು ಬೆಳಗುವುದು, ನಕ್ಷತ್ರಗಳು ಮಿನುಗುವುದು, ಭೂಮಿ ಸ್ಥಿರವಾಗಿ ನಿಂತಿರುವುದು, ಗಾಳಿ ಬೀಸುವುದು, ನದಿ ಹರಿಯುವುದು ಎಲ್ಲವೂ ಧರ್ಮ.

ಅಂದರೆ ಧರ್ಮ ನಮಗೆ ಮಾತ್ರವಲ್ಲ. ಉಳಿದೆಲ್ಲ ಪಶು, ಪಕ್ಷಿ, ಪ್ರಾಣಿ, ಕಲ್ಲು, ಬಂಡೆ, ಮಣ್ಣು ಹೀಗೆ ಎಲ್ಲದಕ್ಕೂ ಧರ್ಮದ ಚೌಕಟ್ಟು ಇದೆ. ಆ ಚೌಕಟ್ಟಿನಲ್ಲಿ ಪ್ರತಿಯೊಂದರ ಸ್ಥಿತಿಯೂ ಅನನ್ಯವಾಗಿರುವುದೇ ವಿಶೇಷ. ಹಾಗಾಗಿ ಪ್ರತಿಯೊಂದಕ್ಕೂ ಭಿನ್ನಭಿನ್ನ ಕಾರ್ಯವ್ಯಾಪ್ತಿ. ಆ ವ್ಯಾಪ್ತಿಯಲ್ಲಿ ಪ್ರತಿಯೊಂದೂ ಒಂದು ಉನ್ನತದ ಸಾಧನೆಗಾಗಿ ತನ್ನದೇ ರೀತಿಯಲ್ಲಿ ತವಕಿಸುತ್ತಿರುತ್ತದೆ. ಆದ್ದರಿಂದ ಧರ್ಮದ ವ್ಯಾಪ್ತಿ ಇಷ್ಟು ಹೌದು, ಇಷ್ಟು ಅಲ್ಲ ಎಂದು ವಿಂಗಡಿಸಲು ಸಾಧ್ಯವಿಲ್ಲ.

### ಹೂರಣ


ಗುರುವಾಣಿ
ಪ್ರಶ್ನೋತ್ತರ
ಮಾಸದ ಗೋವು: ಹರ್ಯಾಣ
ದೇಶೀಯ ಗೋವಿನ ನೈಸರ್ಗಿಕ ಮೊಸರು
ಭಾರತೀಯ ಗೋ ತಳಿಗಳ ಯೋಜಿತ ನಾಶ
ಸುದ್ದಿ ಸಮಾಚಾರ



ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org
ಸಂಪರ್ಕ: govishva@gmail.com


**ಗೋವಧೆಗೆ ಹಾಕಬೇಕು ಸರಿಯಾದ ಕಡಿವಾಣ**
**ಆಗಬೇಕಿದೆ ನಮ್ಮಿಂದ ಗೋಲೋಕ ನಿರ್ಮಾಣ**

ದುರಂತವೇ ಸರಿ. ಇಂದು ನಮ್ಮಲ್ಲಿ ಧರ್ಮ ಶಬ್ದ ಸಂಕುಚಿತ ಅರ್ಥದಲ್ಲಿ ಬಳಕೆಯಾಗುತ್ತಿದೆ. ಪೂಜೆ-ಪುನಸ್ಕಾರ, ಆಚಾರ-ವಿಚಾರ, ಸಂಸ್ಕೃತಿ-ಸಂಪ್ರದಾಯ ಇವಿಷ್ಟನ್ನು ಒಳಗೊಂಡು ಧರ್ಮ ವ್ಯಾಪ್ತಿ ನಿಂತ ನೀರಾಗಿದೆ. ಇವೆಲ್ಲ ಸಾಧನಗಳ ವ್ಯಾಪ್ತಿಯಲ್ಲಿ ಬರುತ್ತವೆ ಎಂಬುದನ್ನು ಮರೆತಿದ್ದೇವೆ. ಅಷ್ಟಾಗಿಯೂ ಇವಿಷ್ಟನ್ನು ಇಟ್ಟುಕೊಂಡರೆ ಎಲ್ಲವನ್ನೂ ಸಾಧಿಸಿದಂತೆ ಎಂದು ಬೀಗುತ್ತೇವೆ. ಒಂದು ವೇಳೆ ಧಕ್ಕೆಯಾದರೆ ಬಡಿದಾಡುತ್ತೇವೆ. ಬಡಿದಾಡುವ ಗಲಾಟೆಯಲ್ಲಿ ನಿಜವಾಗಿಯೂ ಧರ್ಮದಿಂದ ಸಾಧಿಸಬೇಕಾದದ್ದು ಏನನ್ನು ? ಗೊತ್ತಾಗುವುದೇ ಇಲ್ಲ.



ನಮ್ಮಂತೆಯೇ ಉಳಿದವೂ ಅಂದುಕೊಂಡರೆ ನಮ್ಮ ಬದುಕು ಸಾಧ್ಯವೇ ! ನಮ್ಮಂತೆಯೇ ಆಲೋಚಿಸುತ್ತ ಸೂರ್ಯ-ಚಂದ್ರರು ಬೆಳಗುವುದನ್ನೇ ಬಿಟ್ಟುಬಿಟ್ಟರೆ, ಮಳೆ ಬರುವುದೇ ನಿಂತು ಹೋದರೆ, ಬೆಂಕಿ ಬಿಸಿ ಮಾಡದೇ ಹೋದರೆ, ಹಸು ಹಾಲು ಕೊಡುವುದನ್ನೇ ನಿಲ್ಲಿಸಿದರೆ ಏನಾದೀತು !.... ಚಿಂತನೆ ಆಗಲೇಬೇಕು.

ಗಂಭೀರ ಚಿಂತನೆ ಆಗಿದ್ದೇ ಆದರೆ ನಮ್ಮ ಧರ್ಮ ಶಬ್ದ ಮತ್ತೆ ಅರಳುತ್ತದೆ. ಮನಸ್ಸಿಗೆ ವಾಸ್ತವದ ಅರಿವಾಗಿ ಎಲ್ಲರ ಜೀವ ಎಲ್ಲದರೊಂದಿಗೂ ಬೆಸೆದುಕೊಂಡು ಆತಂಕ ಮುಕ್ತವಾಗುತ್ತದೆ.

ಮುಂದೆ ರಕ್ಷಣೆಯ ಪ್ರಶ್ನೆ ಬರುವುದೇ ಇಲ್ಲ. ಕೇವಲ ಬದುಕುವುದು. ಮತ್ತೆ ಉಳಿದವನ್ನು ನಾಶ ಮಾಡಿಯೇ ಬದುಕಬೇಕೆಂಬ ಅನಿವಾರ್ಯತೆಯೂ ಇಲ್ಲ. ನಂತರ ಬೆಳೆಯುವುದು ಸುಂದರ, ಹಸನಾದ ಬದುಕು.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

# ಪ್ರಶ್ನೋತ್ತರ

ಪ್ರಶ್ನೆ: ಮಿಶ್ರ ತಳಿ ಹಸುಗಳ ಹಾಲು "ವಿಷಮಯ" ಎನ್ನುತ್ತಾರೆ. ಹೌದೆ?

ಉ: ಹೌದು. ಹಾಲಿನ ದಂಧೆ ಮಾಡುವವರು ಮಿಶ್ರ ತಳಿ ಹಸುಗಳನ್ನೇ ಸಾಕುತ್ತಾರೆ. ಬೇಗ ಲಾಭ ಸಂಪಾದಿಸಬೇಕು ಎನ್ನುವ ಅವಸರದಲ್ಲಿ ಇನ್ನೂ ಹೆಚ್ಚು ಹಾಲು ಕೊಡಬೇಕೆಂದು ಹಸುಗಳಿಗೆ ಬೋವೈನ್ ಗ್ರೋತ್ ಹಾರ್ಮೋನ್ ಚುಚ್ಚುಮದ್ದು ನೀಡುತ್ತಾರೆ. ಇಂಥ ಹಾಲು ಕುಡಿಯುವುದರಿಂದ ಬೊಜ್ಜು ದೇಹ, ಪ್ರಾಸ್ಟೇಟ್ ಕ್ಯಾನ್ಸರ್ ಮುಂತಾದ ರೋಗಗಳು ಬರುತ್ತವೆ. ಹಾಲು ಗ್ರಂಥಿಗಳಲ್ಲಿ ಹುಣ್ಣಾಗಿ ಕೀವು ಸುರಿಯತೊಡಗಿದಾಗ ಆಂಟಿಬಯೋಟಿಕ್ಸ್ ಕೊಡುತ್ತಾರೆ. ಪಶು ಆಹಾರದಲ್ಲಿ ಯೂರಿಯಾದಂಥ ಅಪಾಯಕಾರಿ ವಸ್ತುಗಳನ್ನು ಬೆರೆಸುತ್ತಾರೆ. ಅದು ಹಾಲಲ್ಲ ಹಾಲಾಹಲ.

ಪ್ರ: ಕೃತಕ ಗರ್ಭಧಾರಣೆ (ತಳಿಸಂಕರ ನೀತಿ) ಎಂದರೇನು?

ಉ: ೧೯೬೦ ರ ದಶಕದಲ್ಲಿ ಭಾರತದಲ್ಲಿ "ಕ್ಷೀರ ಕ್ರಾಂತಿ" ಕಾರ್ಯಕ್ರಮ ಆರಂಭವಾಯಿತು. ಜರ್ಸಿ, ಹೊಲ್ಸ್ಟೀನ್ ಮುಂತಾದ ವಿದೇಶಿ ತಳಿ ಹೋರಿಗಳ ವೀರ್ಯವನ್ನು ತಂದು, ಉತ್ತಮ ತಳಿಯ ಭಾರತೀಯ ಹಸುಗಳಿಗೆ ಕೃತಕವಾಗಿ ಗರ್ಭದಾನ ಮಾಡುವ, ರಾಷ್ಟ್ರವ್ಯಾಪಿ ಕಾರ್ಯಕ್ರಮವನ್ನು ಪಶುಪಾಲನ ಇಲಾಖೆ ಕೈಗೊಂಡಿತು. ಇದರಿಂದ ಮಿಶ್ರ ತಳಿಗಳ ಸಂತತಿ ಹುಟ್ಟಿದವು. ಈ ನೀತಿಯ ಪರಿಣಾಮವಾಗಿ ಅಮೂಲ್ಯವಾದ, ಶುದ್ಧ ಭಾರತೀಯ ತಳಿಗಳು ವಿನಾಶದ ಅಂಚಿಗೆ ಬಂದಿವೆ. ಮನೆ ಮುರುಕ ನೀತಿ ಎಂದರೆ ಇದೇ ತಾನೇ?

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)



ಮಾಸದ ಗೋವು

# ಹರ್ಯಾಣ

**ಮೂಲ ಹರಿಯಾಣ ಪ್ರಾಂತ್ಯಕ್ಕೆ ಸೇರಿದ್ದು. ಉಭಯೋದ್ದೇಶ ತಳಿ. ಸರ್ವಕಾಲಿಕ ಸರ್ವದೇಶಿಕ ಉಪಯುಕ್ತ ಗೋವು. ಜಗತ್ತಿನಾದ್ಯಂತ ಕಾಣಸಿಗುತ್ತದೆ.**

ಹರಿಯಾಣಿ ಅಥವಾ ಹರಿಯಾಣ ತಳಿ, ಹೆಸರೇ ಹೇಳುವಂತೆ ಮೂಲತಃ ಹರ್ಯಾಣ ಪ್ರಾಂತ್ಯದ್ದು . ಆದರೆ ಈ ತಳಿಯ ಸರ್ವಕಾಲಿಕ, ಸರ್ವದೇಶಿಕ ಉಪಯುಕ್ತತೆ ಈ ತಳಿಯನ್ನು ಜಗತ್ತಿನಾದ್ಯಂತ ಕಾಣಸಿಗುವಂತೆ ಮಾಡಿತು. ತುಂಬಾ ಅಪೂರ್ವದ ಉಭಯೋದ್ದೇಶ ತಳಿ. ಹೋರಿಗಳು ಉತ್ತಮ ಕಷ್ಟಸಹಿಷ್ಣು ಕೆಲಸಗಾರ ಪ್ರಾಣಿಗಳಾದರೆ, ಆಕಳುಗಳು ಅಷ್ಟೆ ಉತ್ತಮ ಹಾಲುಕರೆಯುವಂತವು.

ಇವುಗಳನ್ನು ಕ್ರಿ.ಪೂ.೨೦೦೦ ವರ್ಷದ ಆಜುಬಾಜು ಆರ್ಯರು ಇಂದು ಉತ್ತರ ಪಾಕಿಸ್ತಾನವೆಂದು ಗುರುತಿಸಲ್ಪಡುವ ಪ್ರದೇಶದಿಂದ ತಂದರೆಂದೂ, ಅಲ್ಲಿಂದ ಬಂದವುಗಳಲ್ಲಿ ಹೆಚ್ಚು ಜಾನುವಾರುಗಳು ಹರ್ಯಾಣ ಪ್ರಂತ್ಯದಲ್ಲಿ ಜಮೆಯಾದ್ದರಿಂದ ಇವುಗಳಿಗೆ ಹರ್ಯಾಣಿ ಅಥವಾ ಹರ್ಯಾಣ ಎಂಬ ಹೆಸರು ಬಂತೆಂಬುದು ಐತಿಹ್ಯ.



ಹರ್ರ್ಯಾಣ. ಹರ್ರ್ಯಾಣ.

ಹರಿಯಾಣಿ ಉತ್ತರ ಭಾರತದ ಉರಿಬಿಸಿಲಿನ, ಕಲ್ಲುಮಿಶ್ರಿತ ಗಟ್ಟಿಮಣ್ಣಿನಲ್ಲಿ ಉಳುವ ಭಾರವನ್ನು ನೇಗಿಲಯೋಗಿಯಿಂದ ತಾವು ಪಡೆದು ಅತನ ಮೊಗದಲ್ಲಿ ನಗುವರಳಲು ಕಾರಣವಾದ ಒಂದು ಉತ್ತಮ ತಳಿ. ಇವು ಅಜಮಾಸು ಒಂದು ಟನ್ ಭಾರವನ್ನು ಗಂಟೆಗೆ ೨೦ ಮೈಲಿಯಂತೆ ಎಳೆಯಬಲ್ಲ ಶಕ್ತಿಶಾಲಿಗಳು. ತಾಪಮಾನ ೪೨ ಡಿಗ್ರಿ ಸೆ. ಮಿಕ್ಕಿ ಇದ್ದಾಗಲೂ ದಿನಕ್ಕೆ ೨೫–೩೦ ಕಿ.ಮಿ ನಡೆಯಬಲ್ಲಂತವು. ಒಂದು ಅವಧಿಗೆ (Lactation period) ೧೪೦೦ ಲೀ ಸಾಮನ್ಯವಾದರೆ ಸ್ವಲ್ಪ ಕಾಳಜಿವಹಿಸಿದರೆ ೨೧೦೦ ಲೀ ವರೆಗೂ ಹೆಚ್ಚಿಸಬಹುದು ಎನ್ನುತ್ತರೆ ರೈತರು.

ಹರ್ಯಾಣಿಗಳು ಗಿಡ್ಡ ನಿಡಿದಾದ ಕೊಂಬಿನ ಜಾತಿಗೆ ಸೆರಿದವು. ಇವುಗಳದ್ದು ಉದ್ದ ಶರೀರ, ಸಣ್ಣ ಡುಬ್ಬ, ಉದ್ದನೆಯ ಗಂಗೆದೊಗಲು. ಹರ್ಯಾಣಿಗಳ ಒಂದು ವಿಶೇಷವೆಂದರೆ ಇವು ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒದೆಯದ ಅತಿ ಸಾತ್ವಿಕ ಪ್ರಾಣಿಗಳು.

ಸ್ವಲ್ಪ ಸಮಾಧನದ ವಿಷಯುವೆಂದರೆ ಈ ತಳಿಗಳಿನ್ನೂ ಸಂಪೂರ್ಣ ಅವನತಿಯಾಗಿಲ್ಲ ಎಂಬುದು! ಉಳಿದ ಉತ್ತರ ಭಾರತದ ತಳಿಗಳಿಗೆ ಹೋಲಿಸಿದರೆ ಇವುಗಳ ಸಂಖ್ಯೆ ಪರವಾಗಿಲ್ಲ ಎನ್ನುವಷ್ಟಿದೆ. ಅದರಲ್ಲೂ ಪಾಕಿಸ್ತಾನದಲ್ಲಿ ಇವುಗಳದ್ದು ಪ್ರಾಬಲ್ಯ.

ಇವುಗಳು ಅದೆಷ್ಟು ಸಂವಹನಾಶೀಲ ಪ್ರಾಣಿಗಳೆಂದರೆ ಇವುಗಳಿಲ್ಲದಿದ್ದಲ್ಲಿ ಅತ್ಯಂತ ಜನವೀಹೀನ ಪ್ರದೇಶಗಳಲ್ಲಿ ತಮ್ಮ ಜೀವನ ದುಸ್ತರವಾಗುತ್ತಿತ್ತು ಎನ್ನುತ್ತಾರಂತೆ ಗುಡ್ಡಗಾಡು ಜನರು.

**– ಮಧುಕೇಶ ದೊಡ್ಡೇರಿ**



**ಮೂಲ : ರೋಹ್ಟಕ್, ಗುರ್‌ಗಾಂವ್, ಹಿಸಾರ್ – ಹರಿಯಾಣ ರಾಜ್ಯ.**
**ವಿಭಾಗ : ಉಭಯ.**
**ಸಾಧಾರಣದಿಂದ ದೊಡ್ಡ ಗಾತ್ರದ ಹಾಲು ಹಾಗೂ ಕೆಲಸಗಾರ ತಳಿ ಇದು. ರೈತರು ಗಂಡು ಕರುಗಳನ್ನು ಹೆಚ್ಚು ನಿಗಾ ವಹಿಸುತ್ತಾರೆ.**
**ಬಣ್ಣ : ಬಿಳಿ ಅಥವಾ ಬೂದು. ಹೋರಿ –ಮುಂಭಾಗ ಹಾಗೂ ಹಿಂಭಾಗ ಕಪ್ಪಾಗಿರುತ್ತದೆ.**
**ಮುಖ : ಉದ್ದವಾಗಿರುತ್ತದೆ. ಕೊಂಬಿನ ನಡುವೆ ಎಲುಬು ಉಬ್ಬಿರುತ್ತದೆ.**
**ಮೂತಿ: ಕಪ್ಪು.**
**ಕೊಂಬು : ಸಣ್ಣ.**
**ಕಣ್ಣು: ಕಪ್ಪು ರೆಪ್ಪೆಗಳು.**
**ಬಾಲ : ತುದಿ ಕಪ್ಪು.**

# ದೇಶೀಯ ಗೋವಿನ ನೈಸರ್ಗಿಕ ಮೊಸರು

**ಜಿಗಣಿಯ ಪ್ರಶಾಂತಿ ಕುಟೀರದಲ್ಲಿ ನಡೆದ ಯೋಗ, ಗೋವು ಮತ್ತು ಗ್ರಾಮ ಪುನರ್ರಚನೆಯ ಬಗೆಗಿನ ಮೊದಲ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಸ್ತುತ ಪಡಿಸಿದ ಸಂಶೋಧನ ಲೇಖನದ ಸಾರ.**

ಸಾಂಪ್ರದಾಯಿಕವಾಗಿ ತಯಾರಿಸಲ್ಪಟ್ಟ ತುಪ್ಪವು ಉತ್ತಮ ಆರೋಗ್ಯಕ್ಕೆ ಕೀಲಿಕೈಯಾಗಿ ದೀರ್ಘಾಯುಷ್ಯಕ್ಕೆ ಹೆದ್ದಾರಿಯಾಗಿದೆ. ಕಾರಣ ಅದನ್ನು ನೈಸರ್ಗಿಕ ಮೊಸರಿನಿಂದ ಮಾಡಲಾಗುತ್ತದೆ. ಅದು ನಮ್ಮ ದೇಶೀಯ ತಳಿಯ ಗೋವಿನಿಂದ ಮಾತ್ರ ಲಭ್ಯ.

ಪ್ರಪಂಚದಾದ್ಯಂತ, ಉತ್ತಮ ಆರೋಗ್ಯ ಪಡೆಯುವಲ್ಲಿ ಬಹುಅಪರ್ಯಾಪ್ತ ಮೇದಾಮ್ಲ(polyunsaturated fatty acid)ಗಳ ಪಾತ್ರದ ಬಗೆಗೆ ಪ್ರಮುಖವಾಗಿ ಚರ್ಚಿಸಲಾಗುತ್ತಿದೆ. ಈ ರೂಪದ ಕೊಬ್ಬುಗಳನ್ನು ಸಾಮಾನ್ಯ ಉಷ್ಣತೆಯಲ್ಲಿ ಎಣ್ಣೆಯಾಗಿಸಿದಾಗ ಅವುಗಳ ಕರಗುವ ಬಿಂದು ಕಡಿಮೆಯಾಗುತ್ತದೆ. ಮನುಷ್ಯದೇಹದಲ್ಲಿ ಪ್ರೋಸ್ಟಾಗ್ಲ್ಯಾಂಡಿನ್ ಹಾರ್ಮೋನುಗಳ ಸಂಶ್ಲೇಷಣೆ, ಮೆದುಳಿನ ಕ್ರಿಯೆಗಳ ನಿರ್ವಹಣೆ ಹಾಗೂ ಇತರೆ ಕೊಬ್ಬುಗಳನ್ನು ದ್ರವಗಳಾಗಿ ಪರಿವರ್ತಿಸಿ ರಕ್ತದ ಮೂಲಕ ಸಾಗಿಸಲು ಸಹಕರಿಸುವುದು – ಹೀಗೆ ಅನೇಕ ಪ್ರಮುಖ ಕೆಲಸಗಳಿಗೆ ಇವು ಬೇಕಾಗುತ್ತವೆ. ದೇಹಕ್ಕೆ ಈ ಎಣ್ಣೆರೂಪದ ಲಿಪಿಡ್ (ಕೊಬ್ಬು)ಗಳು ಸರಿಯಾಗಿ ಪೂರೈಕೆಯಾಗದಿದ್ದಲ್ಲಿ ಇತರ ಘನರೂಪದ ಕೊಬ್ಬುಗಳು ಆರೋಗ್ಯ ಸಮಸ್ಯೆಗಳನ್ನು ತಂದೊಡ್ಡಬಹುದು. ಅವುಗಳನ್ನು ದೇಹಕ್ಕೆ ಸೇರಿಸಲು ಬೇಕಾದ ಮೂಲವಸ್ತುಗಳು ದೇಹ ಸೇರದಾಗ, ಪ್ರೋಸ್ಟಾಗ್ಲ್ಯಾಂಡಿನ್‌ಗಳೂ ಸರಿಯಾಗಿ ಸಿಗದೆ ಇದರಿಂದ ದೇಹದ ಅನೇಕ ವ್ಯವಸ್ಥೆಗಳು ತೊಂದರೆಯಿಂದ ಬಳಲಬಹುದು.

ಬಹುಅಪರ್ಯಾಪ್ತ ಮೇದಾಮ್ಲಗಳನ್ನು ಹೊಂದಿರುವ ಆಹಾರವಸ್ತುಗಳು ಆಯಾ ಪ್ರದೇಶಗಳಿಗನುಗುಣವಾಗಿ ಹಲವಾರಿವೆ. ಮುಖ್ಯವಾಗಿ ಕೆಲವು ಧಾನ್ಯಗಳು ಹಾಗೂ ಕೆಲವು ಸಮುದ್ರ ಆಹಾರಗಳು ಮೊದಲ ಸಾಲಿನಲ್ಲಿ ಬರುತ್ತವೆ. ಬೇರೆ ಬೇರೆ ಸಂಸ್ಕೃತಿಯಲ್ಲಿ ಈ ರೀತಿಯ ಕೊಬ್ಬಿನಿಂದ ಕೂಡಿದ ಆಹಾರವಸ್ತುಗಳು ಅವುಗಳದ್ದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿವೆ.

ನಮ್ಮ ಭಾರತದಲ್ಲಿ, ದೇಶೀಯ ಗೋವಿನ ನೈಸರ್ಗಿಕ ಮೊಸರು ಅದನ್ನೊಳಗೊಂಡಿರುವ ಪ್ರಮುಖ ಮೂಲವಾಗಿದೆ. ಜೊತೆಗೆ ಅದರ ಉಪಉತ್ಪನ್ನಗಳಾದ ಬೆಣ್ಣೆ ಮತ್ತು ತುಪ್ಪವೂ ಕೂಡ. ತುಪ್ಪವಂತೂ ಒಂದು ರೀತಿಯ ವಿಶಿಷ್ಟ ಆಹಾರವೇ ಸರಿ. ಯಾಕೆಂದರೆ, ಇತರ ದೇಶಗಳಲ್ಲಿ ಬೆಣ್ಣೆಯು ಕೆನೆಯಿಂದ ಮಾಡಲ್ಪಟ್ಟರೆ, ನಮ್ಮಲ್ಲಿ ಮೊಸರಿನಿಂದ ಮಾಡಲ್ಪಡುತ್ತದೆ. ಅಲ್ಲದೆ ದೇಶೀಯ ತಳಿಯಿಂದ ಸಾಂಪ್ರದಾಯಿಕವಾಗಿ ತಯಾರಿಸಲ್ಪಡುವ ಮೊಸರು ಈಗಿನ ಹೈಬ್ರಿಡ್ ತಳಿಗಳದ್ದಕ್ಕಿಂತ ಎಷ್ಟೋ ವಿಭಿನ್ನ ಮತ್ತು ಶ್ರೇಷ್ಠ. ದೇಶೀಯ ತಳಿಯ ಗೋವಿನ ಮೊಸರು ಬಹುಅಪರ್ಯಾಪ್ತ ಮೇದಾಮ್ಲಗಳನ್ನು ಹೊಂದಿದ್ದು, ಅದರಿಂದ ತಯಾರಿಸಿದ ಬೆಣ್ಣೆ ಹಾಗೂ ತುಪ್ಪದಲ್ಲೂ ಅದು ಹೇರಳವಾಗಿರುತ್ತದೆ. ಆದರೆ ಆಧುನಿಕ ತಳಿಗಳದ್ದರಲ್ಲಿ ಮತ್ತು ಆಧುನಿಕ ವಿಧಾನಗಳಿಂದ ತಯಾರಿಸಿದ ಮೊಸರಿನಲ್ಲಿ ಇದು ಇರದು.

ಇದಕ್ಕೆ ಕಾರಣವೇನೆಂದು ತಿಳಿಯಬೇಕಾದರೆ, ಆ ಆಧುನಿಕ ವಿಧಾನದಲ್ಲಿ ಯಾವ ರೀತಿಯಲ್ಲಿ ಮೊಸರನ್ನು ತಯಾರಿಸುತ್ತಾರೆ, ಆಧುನಿಕ ತಳಿಯ ಗೋವುಗಳ ಆಹಾರ ಪದ್ಧತಿ ಎಂಥದ್ದು, ನೈಸರ್ಗಿಕವಾಗಿ ಲಿಪಿಡ್‌ಗಳು ಹೇಗೆ ಅಪರ್ಯಾಪ್ತವಾಗುತ್ತವೆ – ಎಂಬುದನ್ನೆಲ್ಲ ತುಲನೆ ಮಾಡಿ ನೋಡಬೇಕಾಗುತ್ತದೆ. ನೈಸರ್ಗಿಕ ಮೊಸರು, ಪಾಶ್ಚರೀಕರಿಸದ ಹಾಲು ಇವೆಲ್ಲ ಬಹುಅಪರ್ಯಾಪ್ತ ಮೇದಾಮ್ಲಗಳನ್ನು ಒಳಗೊಂಡಿರುತ್ತವೆ ಎಂಬುದನ್ನು ಪುಣೆ ವಿಶ್ವವಿದ್ಯಾನಿಲಯ ಹಾಗೂ ಇನ್ನಿತರೆ ಕೆಲವು ಸ್ಥಳಗಳಲ್ಲಿ ಸಾಬೀತುಪಡಿಸಿ ತೋರಿಸಲಾಗಿದೆ. ದೇಶೀಯ ತಳಿಗಳ ಕೆಚ್ಚಲಿನಲ್ಲಿರುವ ನೈಸರ್ಗಿಕ ಬ್ಯಾಕ್ಟೀರಿಯಾಗಳಲ್ಲಿ ಕಿಣ್ವನ ಕ್ರಿಯೆ ನಡೆಯುವಾಗ ಈ ಮೇದಾಮ್ಲ ಉತ್ಪತ್ತಿಯಾಗುತ್ತದೆ. ಹಾಗಾಗಿ ಈ ನೈಸರ್ಗಿಕ ಬ್ಯಾಕ್ಟೀರಿಯಾಗಳೇ ಹಾಲಿನಲ್ಲಿನ ಮೇದಾಮ್ಲಗಳನ್ನು ಅಪರ್ಯಾಪ್ತಗೊಳಿಸುವ ಕಿಣ್ವನ ಕ್ರಿಯೆಯ ಮೂಲಕ ಅದರಲ್ಲಿ ಒಂದಷ್ಟು ಬಹುಅಪರ್ಯಾಪ್ತ ಮೇದಾಮ್ಲ ಉತ್ಪತ್ತಿಯಾಗಲು ಕಾರಣವಾಗುತ್ತವೆ.

ಈ ಬ್ಯಾಕ್ಟೀರಿಯಾಗಳು ಇಲ್ಲದೇ ಹೋದರೆ, ಅಥವಾ ಹಾಲನ್ನು ಬೇರೆ ಕೃತಕ ವಿಧಾನದ ಮೂಲಕ ಕಿಣ್ವನಗೊಳಿಸಿದರೆ ಅದರಿಂದ ತಯಾರಿಸಲ್ಪಡುವ ಮೊಸರು ಹಾಗೂ ಬೆಣ್ಣೆ, ತುಪ್ಪಗಳಲ್ಲಿ ನಮಗೆ ಅಗತ್ಯವಾದ ಬಹುಅಪರ್ಯಾಪ್ತ ಕೊಬ್ಬನ್ನೊಳಗೊಂಡ್ಡ ವಿಶಿಷ್ಟ ಗುಣ ಇರದು.

ಹಾಗಾಗಿ ನೈಸರ್ಗಿಕವಾಗಿ ತಯಾರಾದ ಮೊಸರಿನಿಂದಾದ ಬೆಣ್ಣೆ ಹಾಗೂ ತುಪ್ಪಗಳಿಗೂ ಆಧುನಿಕ ರೀತಿಯಲ್ಲಿ ಕೃತಕವಾಗಿ ತಯಾರಿಸಿದವುಗಳಿಗೂ ಅಜಗಜಾಂತರ! ಆರೋಗ್ಯಯುತ ಜೀವನ ನಮ್ಮದಾಗಬೇಕಾದರೆ ದೇಶೀಯ ಗೋವಿನ ಹಾಗೂ ಅದರ ನೈಸರ್ಗಿಕ ಉತ್ಪನ್ನಗಳ ಅವಲಂಬನೆ ಅತ್ಯವಶ್ಯಕ.

**ಇಂಗ್ಲಿಶ್ ಮೂಲ: ಅಲೆಕ್ಸ್ ಹಾಂಕಿ**
**ಕನ್ನಡಕ್ಕೆ: ಅನುಶ್ರೀ ಎಲ್.**



# ಭಾರತೀಯ ಗೋ ತಳಿಗಳ ಯೋಜಿತ ನಾಶ

ಭಾರತೀಯ ಗೋವುಗಳ ಇತಿಹಾಸ ಭಾರತದ ಇತಿಹಾಸದಷ್ಟೇ ಪುರಾತನ. ಹರಪ್ಪ ಮೊಹೆಂಜೋದಾರೋ ಉತ್ಖನನದಲ್ಲಿ ದೊರೆತಿರುವ ಬೃಹತ್ ನಂದಿಯ ವಿಗ್ರಹವು ಇದಕ್ಕೆ ಸಾಕ್ಷಿಯಾಗಿದೆ. ವೈದಿಕ ಸಾಹಿತ್ಯವಂತೂ ಗೋವುಗಳ ಗುಣಗಾನದಿಂದ ತುಂಬಿ ಹೋಗಿದೆ.

ಭಾರತೀಯ ಪರಂಪರೆಯಲ್ಲಿ ಗೋವುಗಳ ಸ್ಥಾನ ಹೆತ್ತ ತಾಯಿಗಿಂತಲೂ ಉನ್ನತವಾದದ್ದು. ತಾಯಿಯಾದರೋ ತನ್ನ ಮಕ್ಕಳಿಗೆ ಮಾತ್ರ ಹಾಲು ಕೊಡುತ್ತಾಳೆ. ಆದರೆ ಗೋವುಗಳು ತಮ್ಮ ಜೀವನದ ಉದ್ದಕ್ಕೂ ಮಾನವರಿಗೆ ಹಾಲು ನೀಡಿ ಕಾಪಾಡುತ್ತವೆ.

ಭಾರತದಲ್ಲಿ ಇಂದು ಸುಮಾರು ೩೦ ಶುದ್ಧ ಗೋತಳಿಗಳನ್ನು ಗುರುತಿಸಲಾಗಿದೆ. ಕೆಂಪುಸಿಂಧಿ, ಥಾರ್ ಪಾರ್ಕರ್ ಸಹಿವಾಲ್, ಹರ್ಯಾಣಾ, ರಾಟಿ, ಗಿರ್, ಕಂಕ್ರೇಜ್ ಇವು ಉತ್ತರ ಭಾರತದ ಪ್ರಮುಖ ತಳಿಗಳಾದರೆ, ದೇವಣಿ, ಖಿಲ್ಲಾರಿ, ಒಂಗೋಲ್, ಕೃಷ್ಣಾತೀರ, ಅಮೃತಮಹಲ್, ಹಳ್ಳಿಕಾರ್, ವೆಚ್ಚೂರ್, ಅಂಬ್ಲಾಚೆರಿ, ಕಂಗಾಯಂ, ಇವು ದಕ್ಷಿಣ ಭಾರತದ ಪ್ರಸಿದ್ಧ ತಳಿಗಳು. ಸ್ವಾತಂತ್ರ್ಯಪೂರ್ವದಲ್ಲಿ ಸಹಸ್ರಾರು ವರ್ಷಗಳ ಕಾಲ ಸಮೃದ್ಧವಾಗಿದ್ದ ಭಾರತೀಯ ಗೋ ಸಂಪತ್ತು ಸ್ವಾತಂತ್ರ್ಯ ಬಂದ ಕೇವಲ ೬೦ ವರ್ಷಗಳ ಅವಧಿಯಲ್ಲಿ ಅವನತಿಯ ಅಂಚು ತಲುಪಿದೆ. ಇದು ಅಭಿವೃದ್ಧಿಯ ಹೆಸರಿನಲ್ಲಿ ಸರ್ಕಾರಗಳು, ಹಾಗೂ ಸರ್ಕಾರೀ ಪರಿಣಿತರು(?) ಅನುಸರಿಸಿದ ಗೋವಿರೋಧೀ ನೀತಿಗೆ ಜ್ವಲಂತ ಸಾಕ್ಷಿಯಾಗಿದೆ.

ಇಳಿಮುಖವಾಗುತ್ತಿರುವ ಭಾರತೀಯ ಗೋ ಸಂಪತ್ತು-

ವರ್ಷ-ಗೋವುಗಳು(ಪ್ರತಿ ಸಾವಿರ ಜನಕ್ಕೆ)

೧೯೫೧-೪೨೬

೧೯೭೨-೨೭೮

೧೯೯೧-೨೧೬

೨೦೧೦-೧೦೦ಕ್ಕಿಂತ ಕಡಿಮೆ.

ಸ್ವತಂತ್ರ ಭಾರತದಲ್ಲಿ ದೇಶೀ ಗೋತಳಿಗಳ ವ್ಯವಸ್ಥಿತ ಅವನತಿಗೆ ಮೂರು ಮುಖ್ಯ ಕಾರಣಗಳನ್ನು ಕೊಡಬಹುದು-

೧. ಹಸಿರು ಕ್ರಾಂತಿ

೨. ಕ್ಷೀರ ಕ್ರಾಂತಿ

೩. ಗೋಮಾಂಸ ಕ್ರಾಂತಿ

## ಹಸಿರು ಕ್ರಾಂತಿ

ಭಾರತಕ್ಕೆ ೧೯೭೪ರಲ್ಲಿ ಸ್ವಾತಂತ್ರ್ಯ ಬರುವವರೆಗೆ, ಸುಮಾರು ೧೦,೦೦೦ ವರ್ಷಗಳ ಕಾಲ ದೇಶಾದ್ಯಂತ ವೈಜ್ಞಾನಿಕ, ಸಾವಯವ ಮತ್ತು ಸುಸ್ಥಿರ ಕೃಷಿ ಪದ್ಧತಿಯನ್ನು ಅನುಸರಿಸಲಾಗುತ್ತಿತ್ತು. ಇದು ಕಾಲದ ಪರೀಕ್ಷೆಯಲ್ಲಿ ಗೆದ್ದು ಬಂದ ಕೃಷಿ ಪದ್ಧತಿಯಾಗಿತ್ತು. ಜಾನುವಾರುಗಳು ಅದರಲ್ಲೂ ಮುಖ್ಯವಾಗಿ ಎತ್ತುಗಳು ಹಾಗೂ ದನಕರುಗಳು ಈ ಕೃಷಿ ಪದ್ಧತಿಯ ಕೇಂದ್ರ ಬಿಂದುವಾಗಿದ್ದವು. ಹಸುಗಳನ್ನು ಇಂದಿನಂತೆ ಹಾಲು ಕರೆಯುವ ಯಂತ್ರ ಎಂಬ ದೃಷ್ಟಿಯಿಂದ ನೋಡುತ್ತಿರಲಿಲ್ಲ. ಅವು ಗಂಡು ಕರುಗಳನ್ನು ಹಾಕಬೇಕು. ಅವು ದೊಡ್ಡವಾಗಿ ಕೃಷಿ ಕಾರ್ಯಗಳಿಗೆ ಒದಗಬೇಕು ಎಂಬುದು ಅಭಿಲಾಷೆಯಾಗಿತ್ತು- ಹಾಗಾಗಿ ಭಾರತೀಯ ಗೋತಳಿಗಳಲ್ಲಿ ಕೆಲಸಗಾರ ತಳಿಗಳ ಸಂಖ್ಯೆ ಹೆಚ್ಚಾಗಿರುವುದನ್ನು ಗಮನಿಸಬಹುದು. ದನಕರುಗಳ ಸಗಣಿ ಮತ್ತು ಗಂಜಲದಿಂದ ತಿಪ್ಪೇಗೊಬ್ಬರ ಸಿದ್ಧವಾಗುತ್ತಿತ್ತು. ಅದು ಖರ್ಚಿಲ್ಲದೆ ಮನೆಬಾಗಿಲಲ್ಲೇ ದೊರೆಯುವ, ಭೂಮಿಗೆ ಹಿತವಾದ ಗೊಬ್ಬರವಾಗಿತ್ತು. ಎತ್ತರ ಜಾತಿಯ ಬೆಳೆಗಳನ್ನು ಬೆಳೆಯುತ್ತಿದ್ದುದರಿಂದ, ದನಕರುಗಳಿಗೆ ಹೇರಳವಾಗಿ ಮೇವು ದೊರೆಯುತ್ತಿತ್ತು. ಹೀಗೆ ಕೃಷಿ ಮತ್ತು ಜಾನುವಾರುಗಳು ಪರಸ್ಪರ ಪೂರಕವಾಗಿದ್ದವು. ದನಕರುಗಳು ಭಾರತೀಯ ಕೃಷಿಯ ಹಾಗೂ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದವು.

೧೯೪೭ರಲ್ಲಿ ಸ್ವಾತಂತ್ರ್ಯ ಬರುತ್ತಿದ್ದಂತೆ ಗೋ- ಆಧಾರಿತ ಭಾರತೀಯ ಕೃಷಿ ವ್ಯವಸ್ಥೆ ತೀವ್ರವಾಗಿ ಬದಲಾಗತೊಡಗಿತು. ಅಮೆರಿಕದ ನೆರವಿನಿಂದ ಪ್ರಾರಂಭವಾದ ಭಾರತೀಯ ಕೃಷಿ ವಿಶ್ವವಿದ್ಯಾನಿಲಯಗಳು, ಭಾರತೀಯ ಕೃಷಿ ಪದ್ಧತಿಯನ್ನು ಅವೈಜ್ಞಾನಿಕ ಎಂದು ಹಳಿದು, ವಿದೇಶೀ ರಾಸಾಯನಿಕ ಕೃಷಿ ಪದ್ಧತಿಯನ್ನು ಅಬ್ಬರದಿಂದ ಪ್ರಚಾರ ಮಾಡತೊಡಗಿದವು. ಸರ್ಕಾರದ ಕೃಷಿ ಇಲಾಖೆ ರಾಸಾಯನಿಕ ಕೃಷಿ ಪ್ರಚಾರಕ್ಕೆ ಸೊಂಟಕಟ್ಟಿ ನಿಂತಿತು. ಕೊಟ್ಟಿಗೆ ಗೊಬ್ಬರ ಮತ್ತು ನೇಗಿಲು ಬಳಸುವವರು ಹಳೆಕಾಲದ ಕೃಷಿಕರು, ರಾಸಾಯನಿಕ ಗೊಬ್ಬರ ಮತ್ತು ಟ್ರ್ಯಾಕ್ಟರ್ ಬಳಸುವವರು ಪ್ರಗತಿಪರ ರೈತರು ಎಂದು ಬಿಂಬಿಸಲಾಯಿತು. ೧೯೬೦ರ ದಶಕದಲ್ಲಿ ಪ್ರಾರಂಭವಾದ ಹಸಿರು ಕ್ರಾಂತಿ ಎಂಬ ಸರ್ಕಾರಿ ಕಾರ್ಯಕ್ರಮ, ಅವೈಜ್ಞಾನಿಕ ಹಾಗೂ ಅಸ್ಥಿರ ರಾಸಾಯನಿಕ ಕೃಷಿಗೆ ಮತ್ತಷ್ಟು ಒತ್ತು ನೀಡಿತು. ರಾಸಾಯನಿಕ ಗೊಬ್ಬರ ಹಾಗೂ ದನಕರುಗಳು ಕೃಷಿಯಲ್ಲಿ ಪ್ರಾಮುಖ್ಯತೆ ಕಳೆದುಕೊಳ್ಳತೊಡಗಿದವು. ಟ್ರ್ಯಾಕ್ಟರ್ ಕೊಳ್ಳಲು ಉದಾರಸಾಲ ಹಾಗೂ ಸಬ್ಸಿಡಿ ದೊರೆಯುತ್ತಿದ್ದುದರಿಂದ ಎತ್ತುಗಳು ಕೃಷಿಕನಿಗೆ ಹೊರೆ ಎನಿಸತೊಡಗಿದವು. ಗಿಡ್ಡ ಜಾತಿಯ ಬೆಳೆಗಳು ಪ್ರಚಾರಕ್ಕೆ ಬಂದು, ದನಕರುಗಳ ಮೇವಿನ ಕೊರತೆ ಕೃಷಿಯನ್ನು, ಕಾರ್ಖಾನೆ ಆಧಾರಿತ ಕೃಷಿಯಾಗಿ ಪರಿವರ್ತಿಸಿತು. ದನಕರುಗಳನ್ನು ಕಸಾಯಿಖಾನೆಗೆ ಅಟ್ಟಲು ಹಸಿರು ಕ್ರಾಂತಿ ನೇರವಾಗಿ ಪ್ರಚೋದನೆ ನೀಡಿತು. ಕೇವಲ ೪೦ ವರ್ಷಗಳ ಹಸಿರು ಕ್ರಾಂತಿಯ ಫಲವಾಗಿ ಇಂದು, ಗೋವುಗಳ ಹತ್ಯೆ ಮತ್ತು ರೈತನ ಆತ್ಮಹತ್ಯೆ ಎರಡೂ ಒಟ್ಟಿಗೇ ಸಾಗುತ್ತಿರುವುದನ್ನು ಕಾಣಬಹುದು.

– ಪ್ರೊ ಬಿ.ಎಮ್. ಕುಮಾರಸ್ವಾಮಿ

(ಕೃಪೆ: ವಿಶ್ವಜನನಿ, ವಿಶ್ವ ಗೋ ಸಮ್ಮೇಳನ, ೨೦೦೭, ವಿಶೇಷ ಸಂಚಿಕೆ)

# ಸುದ್ದಿ ಸಮಾಚಾರ

**ಭೂಮಾತೆ ಮತ್ತು ಗೋಮಾತೆ ನಮಗೆ ಅತಿ ಮುಖ್ಯ. ಗೋಮಾತೆಯ ಬಗ್ಗೆ ಅರಿವು ಮೂಡಿಸುವ ದಿಸೆಯಲ್ಲಿ ಗೋವಿಶ್ವ ಪ್ರಯತ್ನಿಸುತ್ತಿದೆ. ಜಗತ್ತಿನ ಮೂಲೆ ಮೂಲೆಯಿಂದ ಗೋ ಸಂಬಂಧಿ ಸುದ್ದಿ ಸಮಾಚಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.**

## ಕರ್ನಾಟಕ ಮುಂಗಡಪತ್ರದಲ್ಲಿ ಪಶುಸಂಗೋಪನೆಗೆ ಉತ್ತೇಜನ

ಕರ್ನಾಟಕದ ವಿತ್ತಮಂತ್ರಿಯೂ ಆಗಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು ೨೦೦೯-೧೦ನೆ ಸಾಲಿನ ಮುಂಗಡಪತ್ರದಲ್ಲಿ ಪಶುಸಂಗೋಪನೆಗೆ ಉತ್ತೇಜನ ನೀಡಿದ್ದಾರೆ. ಅಮೃತ ಮಹಲ್ ಕಾವಲ್ ಅಭಿವೃದ್ಧಿ ಹೊಣೆ ಕರ್ನಾಟಕ ಪಶು ವೈದ್ಯಕೀಯ ವಿಶ್ವ ವಿದ್ಯಾಲಯಕ್ಕೆ ವಹಿಸಿ ಇದಕ್ಕಾಗಿ ೧೦ ಕೋಟಿ ರೂ. ಹಂಚಿಕೆ ಮಾಡಲಾಗಿದೆ. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ೨ ರೂ.ನಂತೆ ಪ್ರೋತ್ಸಾಹ ಧನ ನೀಡುವ ಮೊತ್ತವನ್ನು ಮುಂಗಡಪತ್ರದಲ್ಲಿ ೬೫ ಕೋಟಿ ರೂ.ಗಳಿಂದ ೨೦೦ ಕೋಟಿ ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ.

## ಗೋಮೂತ್ರದಿಂದ ಪೇಯ

ಕ್ರಿಮಿನಾಶಕದ ಅಂಶವಿದೆ ಎಂದು ಸಾಬೀತಾಗಿದ್ದರೂ ಎಗ್ಗಿಲ್ಲದೆ ಮಾರಾಟವಾಗುತ್ತಿರುವ ಬಹುರಾಷ್ಟ್ರೀಯ ಕೋಲಾ ಕಂಪೆನಿಗಳಿಗೆ ಇದೀಗ ದೇಶೀಯ ಪೇಯವೊಂದು ಪ್ರತಿಸ್ಪರ್ಧಿಯಾಗಿ ಹುಟ್ಟಿಕೊಂಡಿದೆ. ಅದು -ಹಸುವಿನ ಗಂಜಲ! ರಾಷ್ಟ್ರೀಯ ಸ್ವಯಂ ಸೇವಕ ಸಂಘ ಇದೀಗ ಗೋಮೂತ್ರದಿಂದ ಲಘುಪೇಯ ಅಭಿವೃದ್ಧಿಪಡಿಸಿದೆ. ಈ ಫಾರ್ಮುಲಾವನ್ನು ಲಖನೌದಲ್ಲಿರುವ ಪ್ರಯೋಗಾಲಯಕ್ಕೆ ಕಳುಹಿಸಿದೆ. ಧನಾತ್ಮಕ ಫಲಿತಾಂಶ ಬರುತ್ತಿದ್ದಂತೆ, ಗೂಮೂತ್ರ ಪೇಯವನ್ನು ಪ್ಯಾಕ್, ಸಂರಕ್ಷಣೆ ಹಾಗೂ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತದೆ ಎಂದು ಆರ್‌ಎಸ್‌ಎಸ್‌ನ ಹರಿದ್ವಾರ ಮೂಲದ ಗೋ ಸಂರಕ್ಷಣಾ ವಿಭಾಗದ ಮುಖ್ಯಸ್ಥ ಓಂ ಪ್ರಕಾಶ್ ತಿಳಿಸಿದ್ದಾರೆ.

ಬಹುರಾಷ್ಟ್ರೀಯ ಕಂಪೆನಿಗಳ ಲಘುಪೇಯಗಳಲ್ಲಿ ಅಪಾಯಕಾರಿ ಕ್ರಿಮಿನಾಶಕ ಅಂಶವಿದೆ. ಆದರೆ, ನಾವು ಅಭಿವೃದ್ಧಿಪಡಿಸಿರುವ ಗೋಮೂತ್ರಕ್ಕೆ ಹಲವು ರೋಗಗಳನ್ನು ವಾಸಿ ಮಾಡಬಹುದಾದ ಶಕ್ತಿ ಇದೆ. ಅದು ನೈಸರ್ಗಿಕವಷ್ಟೇ ಅಲ್ಲ, ಪರಿಣಾಮಕಾರಿ ಕೂಡ ಎಂದು ಅವರು ಹೇಳಿದ್ದಾರೆ.

ಗೋಮೂತ್ರದಿಂದ ತಯಾರಿಸಲಾದ ಟೂತ್‌ಪೇಸ್ಟ್, ಶಾಂಪೂ, ಸೋಪ್, ಮುಖದ ಪೌಡರ್, ಶೇವಿಂಗ್ ಲೋಷನ್, ಬಿಸ್ಕತ್, ಊದುಬತ್ತಿ, ಫಿನೈಲ್, ಸೊಳ್ಳೆ ಬತ್ತಿ, ಡಿಸ್ಟೆಂಪರ್‌ಗಳು ವಿವಿಧ ರಾಜ್ಯಗಳಲ್ಲಿ ಮಾರಾಟವಾಗುತ್ತಿವೆ ಎಂದಿದ್ದಾರೆ.

(ಕೃಪೆ: ಕನ್ನಡಪ್ರಭ)

## ಉತ್ತರಾಖಂಡ ಸರ್ಕಾರದಿಂದ ಗೋಮೂತ್ರ ಘಟಕ ಸ್ಥಾಪನೆ

ಹಲವು ಔಷಧೀಯ ಗುಣಗಳನ್ನು ಹೊಂದಿರುವ ಗೋಮೂತ್ರದ ಅಧಿಕ ಉತ್ಪಾದನೆಗಾಗಿ ಉತ್ತರಾಖಂಡ ಸರ್ಕಾರವು ರಾಜ್ಯದ ಎಲ್ಲೆಡೆ ೧೦೦ ಗೋಮೂತ್ರ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗಿದೆ. ಇದರಿಂದ ಪಶುಸಂಗೋಪನೆಯಲ್ಲಿ ತೊಡಗಿದ ರೈತರು ಗೋಮೂತ್ರ ಮಾರಾಟ ಮಾಡಿ ಹಣ ಗಳಿಸಬಹುದಾಗಿದೆ.

"ಗೋಮೂತ್ರದಿಂದ ಔಷಧ ತಯಾರಿ ಮಾಡುವ ಹಾಗೂ ಅವುಗಳನ್ನು ಇತರೆ ರಾಜ್ಯಗಳಿಗೆ ಕಳುಹಿಸಿಕೊಡುವ ಯೋಜನೆಗೆ ರಾಜ್ಯ ಸರ್ಕಾರ ಅಂತಿಮ ಸ್ಪರ್ಶ ನೀಡುತ್ತಿದೆ" ಎಂದು ಪಶು ಸಂಗೋಪನೆ ಮತ್ತು ಕೃಷಿ ಸಚಿವ ತ್ರಿವೆಂದ್ರ ರಾವತ್ ಹೇಳಿದ್ದಾರೆ. ರಾಜ್ಯದ ಹಲವೆಡೆ ಈಗಾಗಲೆ ಇಂತಹ ಕೇಂದ್ರಗಳು ಆರಂಭವಾಗಿದ್ದು, ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸರ್ಕಾರವು ಈ ನಿಟ್ಟಿನಲ್ಲಿ ಆಯುರ್ವೇದ ವೈದ್ಯರನ್ನೂ ಸಂಪರ್ಕಿಸಿ ಸೂಕ್ತ ಸಲಹೆ ಪಡೆದು ಕೇಂದ್ರಗಳ ಸ್ಥಾಪನೆಗೆ ಗಂಭೀರ ಪ್ರಯತ್ನ ನಡೆಸಿದೆ ಎಂದಿದ್ದಾರೆ.

(ಕೃಪೆ: ಪ್ರಜಾವಾಣಿ)

**ಇನ್ನು ಮುಂದಾದರೂ ನಿಲ್ಲಬೇಕು ಗೋವಧೆ**
**ಅದಕ್ಕೆ ಕೂಡಲೇ ಬರಬೇಕು ತಕ್ಕ ಮಸೂದೆ**

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ-ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು ಹದಿನೇಳನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ-ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com